SRI BHASKAR NAIDU.—Sri Azeez Sait was also the Transport Minister. I would, therefore, say it is not fair on his part to make such remarks against the Hon'ble Minister for Transport. It is very very unfair on his part to make such remarks. Those words, therefore, be expunged and they should not go on record. He cannot say that.

SRI S. BANGARAPPA.—Sir, it is not fair on the part of the hon. member Sri Azeez Sait to make such remarks.

MR, SPEAKER.—I cannot tolerate these things no matter whoever he may be. It is not proper to use such words. In view of the clarifications given by the Hon'ble Minister for Revenue this matter may be treated as closed. ಮಾನ್ಯ ಸದಸ್ಯರು ಸಭೆಯಲ್ಲಿ ಘನತೆ ಗೌರವದಿಂದ ನಡೆದು ಕೊಳ್ಳಬೇಕು, ಅವರು ತಮ್ಮ ವರ್ತನೆಯನ್ನು ತಿದ್ದಿಕೊಳ್ಳದೇ ಇದೇ ರೀತಿ ಮಾಡುತ್ತಿದ್ದರೆ ಅವರ ವರ್ತನೆಯ ವಿರುದ್ಧ ನೇಮ್ ಮಾಡಬೇಕಾಗುತ್ತದೆ, ಆದುದರಿಂದ ಅವರು ತಮ್ಮ ವರ್ತನೆಯನ್ನು ತಿದ್ದಿ ಕೊಳ್ಳಬೇಕೆಂದು ಹೇಳುತ್ತೇನೆ. ಮತ್ತು ಮಾನ್ಯ ಸದಸ್ಯರು ಉಪಯೋಗಿಸಿರತಕ್ಕ ಪದವನ್ನು ಸಹ ಎಕ್ಸ್‌ಪಂಜ್ ಮಾಡಲಾಗಿರುತ್ತದೆ.

MOTION FOR ELECTION TO THE SENATE OF KARNATAK UNIVERSITY

SRI S. BANGARAPPA. (Minister for Revenue and Agriculture)—Sir on behalf of the Chief Minister, I beg to move that:.

> "This Assembly do proceed to elect Five members to the Senate of the Karnatak University in accordance with Section 21(1) (14) of the Karnataka State Universities Act, 1976."

MR. SPEAKER.—The question is that,

> "This Assembly do proceed to elect Five members to the Senate of the Karnatak University in accordance with Section 21(1) (14) of the Karnataka State Universities Act, 1976."

The motion was adopted.

Statement by Minister

re : *Revision of Procurement and selling prices of milk of Bangalore Milk Dairy*

SRI Y. RAMAKRISHNA (Minister for Law, Parliamentary Affairs and Animal Husbandry).—Sir, I would like to make the following statement:

Government and the Board of the Karnataka Dairy Development Corporation (KDDC) have had under consideration for some time, the question of revision of procurement and selling prices of milk. KDDC constituted a sub-committee of the Board which included some Presidents of the Milk Producers' Unions to go into this question and make its recommendations. It recommended an increase in the procurement price of milk by 20 paise per litre and the selling price 30 paise per litre.

The milk procurement price has remained static for several years past. Government have taken into account the recent increases in the cost of inputs to the milk producers. On a comparison with the prices paid by Dairies in the neighbouring States of Tamil nadu and Andra Pradesh which have large Dairy Corporations comparable to KDDC's size and range, it is found that the milk procurement prices of KDDC even at present are higher for buffalo milk than the prices paid by either Andhra Pradesh or Tamilnadu Dairies and for cow milk they are almost comparable as the following table of current lean season prices per Kg. of milk will show :

	Buffalo milk of 6% fat and 9% SNF	Cow milk of 4% fat and 8.5% SNF
K.D.D.C	Rs. 1.86	1.55
A.P.D D.C	Rs. 1.72	1.72
T.N.D.D.C	Rs. 1.74	1.65

It is significant that the present selling price of milk of KDDC is also by far the lowest among these dairies after making allowances for the reconstitution practices followed by the other dairies. If butter fat and milk powder purchased from the Indian Dairy Corporation were to be used by KDDC to reconstitute the milk supplied, the cost of the milk can no doubt be reduced. Government are of the view that this has to be kept to the minimum and used only to offset shortfalls in supply as the basic development orientation of KDDC's constitution and concept has always to receive priority. In other words, it will be the endeavour of both the Government and the KDDC to promote the production of milk within the State so that it constitutes as high a percentage of its total milk supply as possible, because Government recognises the tremendous potential which dairy development has for providing supplementary income to large number of rural poor families such as the small and marginal farmers, the rural artisans, landless agricultural labourers and Scheduled Castes and Scheduled tribes.

The selling price of sachet milk per litre on date is as follows :

KDDC.	...	Rs. 2.05
TNDDC.	...	Rs. 2.10
APDDC.	...	Rs. 2 50

If variations in the reconstitution proportions between the KDDC and some of the other Dairies are taken into account, the very low price charged by KDDC for its supply would stand in still more striking comparison.

The spread between the procurement and the sale price naturally follows the same pattern, the figures as on date for the actual mix of milk of being as follows per litre of milk sold in sachets :

KDDC.	...	Rs. 0,50 paise.
TNDDC.	...	Rs. 0.745 paise.
APDDC.	...	Rs, 1.10 paise.

However, it is not possible to ignore the fact that the dairies' operations result in a substantial annual loss of nearly Rs. 2 crores which has to be subsidised from General Revenues. The continuing ability of KDDC to enlarge its activities, diversify the range of its milk products and promote dairy development on a much more rapid scale in the rural areas is thereby compromised. The rise in the cost of inputs like chemicals, packaging materials, utilities like water and electricity and transport accentuate the problem.

In view of all these factors and, particularly, to continue the potentential of dairy development in the State as a means to relieve rural poverty and provide a beneficiary oriented scheme of a very effective nature, Government have decided that eventhough the pricing structure of KDDC at present levels, bears comparison with the major dairies in the neighbouring State, the procurement price of milk paid by KDDC in the lean season be enhanced by 25 paise per litre. The same increase will be applicable also to the Government Dairies in the State. As an increase in the selling price of milk is inevitable, Government have also decided to increase the selling price by 30 paise per litre.

The revised prices would come into effect from July 24, 1980.

† ಶ್ರೀ ಡಿ. ಜಯದೇವರಾಜ್ ಅರಸ್. ಅಧ್ಯಕ್ಷರೇ. ಇದರ ಬಗ್ಗೆ ಸರ್ಕಾರದವರ ಗಮನವನ್ನು ಕೆಳೆಯಂ ಬಯಸುವುದೇನೆಂದರೆ, ಇವರು ೨೫ ಪೈಸೆ ಹೆಚ್ಚಿಗೆ ರೈತರಿಗೆ ಕೊಟ್ಟು ಮಾರುವಾಗ ೨೫, ೩೦ ಹೆಚ್ಚಿಗೆ ಮಾರುತ್ತಿದ್ದಾರೆ ಇದರಿಂದ ಯಾರಿಗೆ ಹೆಚ್ಚಿಗೆ ಕೊಟ್ಟಂತಾಯಿತೆಂಬುದನ್ನು ಯೋಚನೆ ಮಾಡಿ

† Indicates that remarks or speeches have not been revised by the member concerned.

ನೋಡಬೇಕಾಗಿದೆ. ಇವತ್ತು ಹಾಲನ್ನು ಉತ್ಪತ್ತಿ ಮಾಡಬೇಕಾಗಿದ್ದರೆ ಅದಕ್ಕೆ ಎಷ್ಟು ಖರ್ಚು ಬರುತ್ತದೆಂಬುದನ್ನು ಲೆಕ್ಕ ಹಾಕಿದರೆ ೧ ರೂ.೬೫ ಪೈಸೆ ಖರ್ಚಿಗೆ ಒಂದು ಲೀಟರ್‌ಗೆ ಬರುತ್ತದೆ. ಈಗ ತಾವು ಕೊಡುತ್ತಿರತಕ್ಕಂಥದ್ದು ಕೇವಲ ೫೦ ಪೈಸೆ ಹೆಚ್ಚಿಗೆ ಕೊಡುವುದರಿಂದ, ಹಾಲನ್ನು ಕರೆದು ಅದನ್ನು ಮಾರಿ ಜೀವನ ಮಾಡತಕ್ಕವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸಿದ ಹಾಗಾಯಿತೇ ? ಆದುದರಿಂದ ತಾವು ಸರಿಯಾಗಿ ಲೆಕ್ಕ ಹಾಕಿಲ್ಲವೆಂದು ಹೇಳಬೇಕಾಗಿದೆ. ಇದರ ಜೊತೆಗೆ ೩. ೪,೬ ತಿಂಗಳಿನಿಂದ ಈಚೆಗೆ ಎಲ್ಲಾ ವಸ್ತುಗಳ ಬೆಲೆಗಳು ಆಷ್ಟೇ ತೀವ್ರವಾಗಿ ಏರಿರುವುದರಿಂದ ಅದರ ಪರಿಣಾಮ ರೈತನ ಮೇಲೆ ಹಾಲು ಉತ್ಪಾದನೆ ಮಾಡತಕ್ಕವರ ಮೇಲೆ ಬೀರಿದೆ ಎಂಬುದನ್ನು ಸಹ ತಾವು ಯೋಚನೆ ಮಾಡಬೇಕಾಗಿದೆ, ಅವಮ ಒಂದು ಏಮ್ಮೆ ಕೊಂಡುಕೊಳ್ಳಬೇಕಾಗಿದ್ದರೆ ಎಷ್ಟು ಕಷ್ಟ ವಿದೆ ಎಂಬುದನ್ನು ಸಹ ತಾವ್ಯೋಚನೆ, ಮಾಡಿ ನೋಡಬೇಕು. ಅವರ ಕಷ್ಟ ಎಷ್ಟು ಎಂಬುದನ್ನು ಯಾರೂ ಲೆಕ್ಕ ಹಾಕಿಲ್ಲ ಯಾವ ತಜ್ಞರು ಈ ಲೆಕ್ಕವನ್ನು ಹಾಕಿದರೋ ನನಗೆ ಗೊತ್ತಿಲ್ಲ. ಇದರ ಬಗ್ಗೆ ಮೈಸೂರಿನಲ್ಲಿ ಮೂರು ಸಾವಿರ ಜನ ರೈತರು ಒಂದು ಕಡೆ ಸೇರಿ ಒಂದು ನಿರ್ಣಯ ಮಾಡಿದ್ದಾರೆ. ಇದರ ಬಗ್ಗೆ ಅವರು ಒಂದು ಆಕ್ಷನ್ ಕಮಿಟಿಯನ್ನೂ ಸಹ ಮಾಡಿದ್ದಾರೆ, ಅವರಲ್ಲಿ ಯಾರನ್ನಾದರೂ ಕರೆಸಿ ಅವರನ್ನು ವಿಚಾರಣೆ ಮಾಡಿ ಅವರಿಗೆ ಸಮಾಧಾನ ಮಾಡಬೇಕಾಗಿತ್ತು. ನಿಮ್ಮ ಕಷ್ಟ ಏನು ಯಾವರೀತಿ ನಿಮಗೆ ಸಹಾಯ ಮಾಡಿದರೆ ನಿಮಗೆ ಅನುಕೂಲವಾಗುತ್ತದೆ ಎಂಬ ಬಗ್ಗೆ ಅವರನ್ನು ಕರೆಸಿ ಚರ್ಚೆ ಮಾಡಿದ್ದರೆ ಉತ್ತಮವಾಗಿತ್ತು. ಅವರು ಸುಮಾರು ೩-೪ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದರು ಅದರ ಬಗ್ಗೆ, ಇಲ್ಲಿ ಏನೂ ಹೇಳಿಲ್ಲ. ಅವರನ್ನು ಕರೆಸುವುದಕ್ಕೆ ಯಾವ ಪ್ರಯತ್ನವನ್ನೂ ಸಂಬಂಧಪಟ್ಟ ಅಧಿಕಾರಿಗಳು ಮಾಡಿಲ್ಲ. ತಾಸಕರನ್ನೂ ಕರೆದು ಮಾತನಾಡಿಲ್ಲ. ಹಾಲಿನ ಉತ್ಪಾದಕರನ್ನೂ ಕರೆದು ಮಾತನಾಡಿಲ್ಲ. ಹಾಲು ಉತ್ಪಾದಕರಿಗೆ ಒಂದು ಲೀಟರಿಗೆ ೫೫ ಪೈಸೆ ಜಾಸ್ತಿ ಮಾಡಿದ್ದೇವೆ ಎಂದು ಮಾನ್ಯ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಹೇಳಿದ್ದಾರೆ. ಆದರೆ ಈಗ ಸರ್ಕಾರದವರು ರೈತರಿಗೆ ಹಾಲು ಉತ್ಪಾದಕರಿಗೆ ಒಂದು ಲೀಟರಿಗೆ ೫೫ ಪೈಸೆ ಏನು ಕೊಟ್ಟಿದ್ದಾರೆ ಆದರಿಂದ ಅವರಿಗೆ ಏನೂ ಉಪಯೋಗವಾಗುವುದಿಲ್ಲ. ಅವರು ಕೇಳಿರುವ ಸೌಲಭ್ಯಗಳ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಏನೂ ಹೇಳಿಲ್ಲ. ಮೈಸೂರು ಮತ್ತು ಪಾಂಡ್ಯಾದಲ್ಲಿ ಹಾಲು ಉತ್ಪಾದಕರ ಯೂನಿಯನ್‌ಗೆ ಸಂಬಂಧಪಟ್ಟ ಹಾಗೆ ಒಂದು ಆಕ್ಷನ್ ಕಮಿಟಿಯನ್ನು ರಚಿಸಿದ್ದಾರೆ ಅವರನ್ನು ಕರೆಸಿ ವಿಚಾರ ವಿನಿಮಯ ಮಾಡಬೇಕಾಗಿತ್ತು. ನಂತರ ಹೇಳಿಕೆ ಕೊಟ್ಟಿದ್ದರೆ. ಚೆನ್ನಾಗಿತ್ತು. ಇವೊತ್ತು ಹಾಲು ಉತ್ಪಾದಕರಿಗೆ ರೈತರಿಗೆ ಹಸು ಮತ್ತು ಎಮ್ಮೆಗಳಿಗೆ ಉಪಯೋಗಿಸತಕ್ಕ ಹುಲ್ಲು, ಬೂಸಾ, ಹಿಂಡಿ ಇತ್ಯಾದಿ ಎಲ್ಲಾ ಬೆಲೆಗಳೂ ಜಾಸ್ತಿಯಾಗಿವೆ, ಜೊತೆಗೆ ಹಾಗೂ ಬೆಲೆಗಳೂ ಜಾಸ್ತಿಯಾಗಿವೆ. ಹೀಗಿರುವಾಗ ಅವರ ಬೇಡಿಕೆಗಳು ನ್ಯಾಯವಾಗಿವೆ. ಇವೊತ್ತಿಂದ ಹಾಲು ಉತ್ಪಾದಕರು, ರೈತರು ಮೈಸೂರಿನಲ್ಲಿ ಸ್ಟ್ರೈಕ್ ಮಾಡುತ್ತಿದ್ದಾರೆ. ಅದರ ಮುಖಂಡರನ್ನು ಕರೆಸಿ ಅವರೊಡನೆ ಮಾತುಕತೆ ನಡೆಸಿ ಈಗ ನೀವು ನಿಮ್ಮ ಸ್ಟ್ರೈಕ್ ವಾಪಸ್ಸು ತೆಗೆದುಕೊಳ್ಳಿ ಈಗ ಇಷ್ಟು ಹಾಲಿಗೆ ಬೆಲೆ ಜಾಸ್ತಿ ಮಾಡಿದ್ದೇವೆ. ಇನ್ನೂ ಜಾಸ್ತಿ ಮಾಡಬೇಕು ಎಂದರೆ ಕಷ್ಟವಾಗುತ್ತದೆ, ಮುಂದೆ ಇದನ್ನು ಉತ್ತಮ ಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನುವ ಭರವಸೆಯನ್ನು ಕೊಟ್ಟು ಸ್ಟ್ರೈಕ್ ವಾಪಸ್ಸು ತೆಗೆದುಕೊಳ್ಳಿ ಎಂದು ಅವರಿಗೆ ಸರ್ಕಾರದವರು ಒಂದು ಸೂಚನೆಯನ್ನು ಕೊಡಬೇಕಂ ಎಂದು ನಾನು ಅಧ್ಯಕ್ಷರ ಮೂಲಕ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

† ಶ್ರೀ ಎಚ್. ಡಿ. ಚೌಡಯ್ಯ. —ಮಾನ್ಯ ಮಂತ್ರಿಗಳು ಹೇಳಿಕೆ ಕೊಡುವುದಕ್ಕೆ ಮುಂಚೆ ಹಾಲು ಉತ್ಪಾದಕರ ಮತ್ತು ರೈತರ ಪ್ರತಿನಿಧಿಗಳನ್ನು ಕರೆಸಿ ಅವರೊಡನೆ ಸಮಾಲೋಚನೆ ಮಾಡಿ ವಿಚಾರ ವಿನಿಮಯ ಮಾಡಬೇಕಾಗಿತ್ತು. ಮತ್ತು ಈಗ ಮಾನ್ಯ ಮಂತ್ರಿಗಳು ಈ ಹಾಲಿನ ರೇಟನ್ನು ನಮ್ಮ ಪಕ್ಷದ ರಾಜ್ಯಗಳಾದ ತಮಿಳುನಾಡು, ಆಂಧ್ರ ಈ ರಾಜ್ಯಗಳ ಮಾದರಿಯಲ್ಲಿ ಕೊಟ್ಟಿದ್ದಾರೆ. ಜೊತೆಗೆ ಇವರು ಪುಷ್ಟಿನು ಒಂಗಾದ ಅಂಕಿ ಅಂಶಗಳನ್ನೂ ಕೂಡ ತರಿಸಿಕೊಂಡು ನೋಡಬೇಕಾಗಿತ್ತು. ನಮ್ಮ ರಾಜ್ಯದಲ್ಲಿ ರಚ್ಯಮಟ್ಟದ ಒಂದು ಮಿಲ್ಕ್ ಪೌಡರ್ ಮ್ಯಾರ್ಕೆಟಿಂಗ್ ಫೆಡರೇಷನ್ ಸ್ಥಾಪನೆ ಮಾಡಬೇಕು. ಅವರಿಗೆ ಈ ಹಾಲಿನ ನಿರ್ವಹಣೆಯ ಜವಾಬ್ದಾರಿಯನ್ನು ವಹಿಸಬೇಕು. ಈಗ ಇವರು ಒಂದು ಲೀಟರಿಗೆ ೫೫ ಪೈಸೆಯನ್ನು ಏನು ಜಾಸ್ತಿ ಮಾಡಿದ್ದಾರೆ ಇದು ಹಾಲು ಉತ್ಪಾದಕರಿಗೆ ಯಾವುದಕ್ಕೂ ಸಾಕಾಗುವುದಿಲ್ಲ. ಇವೊತ್ತು ಹಾಲು ಉತ್ಪಾದಕರ ಮತ್ತು ರೈತರ ಕಷ್ಟವನ್ನು ಹೇಳುವುದಕ್ಕಾಗುವುದಿಲ್ಲ, ಈಗ ೫-೬ ವರ್ಷಗಳಿಂದ ವರ್ಷೇ ತಿಂಗಳು ತಿಂಗಳು ಹಸುಗಳು ಎಮ್ಮೆಗಳ ಬೆಲೆಗಳೂ ಜಾಸ್ತಿಯಾಗುತ್ತವೆ. ಅವುಗಳಿಗೆ ಉಪಯೋಗಿಸುವ ಆಹಾರ ವಸ್ತುಗಳಾದ ಹುಲ್ಲು, ಹಿಂಡಿ, ಬೂಸ ಇತ್ಯಾದಿಗಳ ಬೆಲೆಗಳೂ

ಜಾಸ್ತಿಯಾಗುತ್ತಿವೆ, ಆದ್ದರಿಂದ ಹಾಲು ಉತ್ಪಾದಕರಿಗೆ, ರೈತರಿಗೆ ಒಂದು ಲೀಟರಿಗೆ ೨ಱ ಪೈಸೆ ಏನು ಬೆಲೆ ಜಾಸ್ತಿ ಮಾಡಿದ್ದಾರೆ ಇದು ಅವರಿಗೆ ಏನೂ ಸಾಕಾಗುವುದಿಲ್ಲ. ಬೇರೆ ರಾಜ್ಯಗಳಲ್ಲಿ ಯಾವ ರೇಟ್ ಇದೆ ಅದನ್ನೂ ಕೂಡ ತರಿಸಿ ನೋಡಿ ರೈತರ ಮತ್ತು ಹಾಲು ಉತ್ಪಾದಕರ ಕಷ್ಟ ಏನಿದೆ ಎಂಬುದನ್ನು ನೋಡಿ ಇನ್ನೂ ಸ್ವಲ್ಪ ಜಾಸ್ತಿ ರೇಟು ಕೊಡುವ ಹಾಗೆ ವ್ಯವಸ್ಥೆ ಮಾಡುವುದು ಒಳ್ಳೆಯದು. ಮಹಾರಾಷ್ಟ್ರ ಮತ್ತು ಕೇರಳದಲ್ಲಿ ರೇಟ್ ಎಷ್ಟು ಇದೆ ಎಂಬುದನ್ನೂ ತರಿಸಿಕೊಂಡು ಇದರ ಒಂದು ಬೆಲೆಯನ್ನು ನಿಗದಿ ಮಾಡಬೇಕು.

ಶ್ರೀ ಕೆ. ಎಚ್. ಹನುಮೇಗೌಡ.—ಡೈರಿ ಡೆವಲಪ್‌ಮೆಂಟ್ ಪ್ರಾಜೆಕ್ಟ್ ಬಹಳ ಉಪಯುಕ್ತವಾದ ಯೋಜನೆ ಎಂದು ಈ ಸದನದಲ್ಲಿ ಅನೇಕ ಸಾರಿ ಚರ್ಚೆಯಾಗಿದೆ. ಈ ಯೋಜನೆಯನ್ನು ತಂದಂತಹ ಉದ್ದೇಶ ಗ್ರಾಮಾಂತರ ಪ್ರದೇಶಗಳಲ್ಲಿ ಬಡ ರೈತರ ಆರ್ಥಿಕ ಸುಧಾರಣೆಗೆ ಬಹಳ ಉಪಯುಕ್ತವಾದ ಪ್ರಾಜೆಕ್ಟ್ ಸೋಷಿಯೋ ಎಕನಾಮಿಕ್ ಚೇಂಜ್ ಆಗಬೇಕು ಎಂದು ಈ ಡೈರಿಡೆವಲಪ್‌ಮೆಂಟ್ ಪ್ರಾಜೆಕ್ಟಿನ ಉದ್ದೇಶ ಏನಿತ್ತೋ ಆ ಉದ್ದೇಶವನ್ನು ಕಾರ್ಯಗತ ಮಾಡಿಲ್ಲ. ಒಟ್ಟಿನಲ್ಲಿ ಈಗ ರೈತರಿಗೆ, ಹಾಲು ಉತ್ಪಾದಕರಿಗೆ ಒಂದು ಲೀಟರಿಗೆ ೨ಱ ಪೈಸೆ ಜಾಸ್ತಿ ಮಾಡಿರುವುದಕ್ಕಾಗಿ ನಾನು ಮಾನ್ಯ ಪಶುಸಂಗೋಪನಾ ಖಾತೆಯ ಮಂತ್ರಿಗಳಿಗೂ, ಮಾನ್ಯಮಂಖ್ಯ ಮಂತ್ರಿಗಳಿಗೂ ನಾನು ಅಭಿನಂದಿಸುತ್ತೇನೆ. ಈಗ ಕಳೆದ ಒಂದೂವರೆ ವರ್ಷಗಳಿಂದಲೂ ಪ್ರಯತ್ನ ನಡೆಯುತ್ತಿತ್ತು. ಈಗ ೬ ತಿಂಗಳ ಹಿಂದೆ ಈ ಸಭೆ ಸೇರಿದಾಗ ಒಂದು ಲೀಟರಿಗೆ ೨೦ ಪೈಸೆ ಜಾಸ್ತಿ ಮಾಡಬೇಕು ಎನ್ನುವ ವಿಷಯಕ್ಕೆ ಸಂಬಂಧಪಟ್ಟಂತೆ ನಿರ್ಣಯವನ್ನು ಇಟ್ಟುಕೊಂಡಿದ್ದರು. ಆದರೆ ಜಾಸ್ತಿ ಮಾಡಿರಲಿಲ್ಲ. ಹಿಂದಿನ ಸರ್ಕಾರ ಇದ್ದಾಗ ಶ್ರೀಮಾನ್ ರಾಮೇಗೌಡರು ಪಶುಸಂಗೋಪನಾ ಖಾತೆಯ ಮಂತ್ರಿಗಳಾಗಿದ್ದಾಗ ನಾವು ಅವರನ್ನು ಕೈಮುಗಿದು ಬೇಡಿಕೊಂಡು ೧ ಲೀಟರಿಗೆ ೧೦ ಪೈಸೆ ಜಾಸ್ತಿ ಮಾಡಿ ಎಂದು ಕೇಳಿಕೊಂಡರೂ ಕೂಡ ಅದನ್ನು ಮಾಡುವುದಕ್ಕೆ ಅವಕಾಶವಾಗಲಿಲ್ಲ. ಈಗ ಮಾನ್ಯ ಮಂತ್ರಿಗಳಾದ ವೈ. ರಾಮಕೃಷ್ಣ ಅವರು ರೈತರ ಸ್ಥಿತಿಗತಿಗಳನ್ನು ಆಲೋಚನೆ ಮಾಡಿ ಒಂದು ಲೀಟರಿಗೆ ೨ಱ ಪೈಸೆ ಜಾಸ್ತಿ ಮಾಡಿದ್ದಾರೆ. ಅದಕ್ಕಾಗಿ ಮಾನ್ಯ ಮಂತ್ರಿಗಳಿಗೆ ನಾನು ರೈತರ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈಗ ಈ ರೇಟನ್ನು ಫಿಕ್ಸ್ ಮಾಡಿದ್ದಾರೆ. ಮುಂದೆ ಇದನ್ನು ರೀಕನ್‌ಸಿಡರ್ ಮಾಡಬೇಕಾದ ಸಂದರ್ಭ ಬರಬಹುದು. ಕನ್‌ಸ್ಯೂಮರ್ ಪಾಯಿಂಟ್ ತೆಗೆದುಕೊಂಡು ಮಾನ್ಯ ಮಂತ್ರಿಗಳು ಈ ರೇಟನ್ನು ಫಿಕ್ಸ್ ಮಾಡಿದ್ದಾರೆ.

ಎರಡನೆಯದು ಇಂಡಿಯನ್ ಡೈರಿ ಕಾರ್ಪೊರೇಷನ್ ಯೋಜನೆಯನ್ನು ಒಪ್ಪಿಕೊಂಡರೆ ನಮಗೆ ಆದರಿಂದ ಅನುಕೂಲವಾಗುತ್ತದೆ. ಇದು ಎರಡು ವರ್ಷಗಳಿಂದ ಪ್ರಯತ್ನ ನಡೆಯುತ್ತದೆ. ಇದುವರೆಗೂ ಕಾರ್ಯಗತವಾಗಿಲ್ಲ ಆದ್ದರಿಂದ ಮಾನ್ಯ ಸಚಿವರು ಇದರ ಬಗ್ಗೆ ಸೂಕ್ತ ಕ್ರಮತೆಗೆದುಕೊಂಡು ಇದನ್ನು ಒಪ್ಪಿಕೊಂಡು ಮಿಲ್ಕ್ ಪೌಡರ್ ಮಾರ್ಕೆಟಿಂಗ್ ಫೆಡರೇಷನ್ ಮಾಡುವುದಕ್ಕೆ ಕ್ರಮ ತೆಗೆದು ಕೊಳ್ಳಬೇಕು ಎಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಮಂಡ್ಯ ಮತ್ತು ಮೈಸೂರು ಜಿಲ್ಲೆಯ ರೈತರು ಹಾಲಿನ ರೇಟನ್ನು ಜಾಸ್ತಿ ಮಾಡುವುದಕ್ಕೆ ಒಗ್ಗಟ್ಟಾಗಿ ಪ್ರಯತ್ನ ಮಾಡುತ್ತಿದ್ದರು. ಅವರ ಪ್ರಯತ್ನಕ್ಕೆ ಸರ್ಕಾರದವರು ಮನ್ನಣೆ ಕೊಟ್ಟು ಹಾಲಿನ ರೇಟನ್ನು ಜಾಸ್ತಿ ಮಾಡಿ ರೈತರಿಗೆ ಅನುಕೂಲ ಮಾಡಿದ್ದಕ್ಕಾಗಿ ಸರ್ಕಾರದವರನ್ನು ಪಂದಿಸುತ್ತೇನೆ. ಶ್ರೀಮಾನ್ ಚೌಡಯ್ಯನವರು ಹೇಳಿದಂತಹ ರೈತರ ಕೆಲವು ಬೇಡಿಕೆಗಳ ಬಗ್ಗೆ ಮಾನ್ಯ ಸಚಿವರು ಏನೂ ಹೇಳಲಿಲ್ಲ. ಆದ್ದರಿಂದ ರೈತರ ಬೇಡಿಕೆಗಳನ್ನು ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲನೆ ಮಾಡಬೇಕಾ ಎಂದು ಹೇಳಿ ನಾನು ನನ್ನ ಮಾತನ್ನು ಮುಂಗಿಸುತ್ತೇನೆ.

† ಶ್ರೀ ಆತ್ಮಾನಂದ.—ಮಾನ್ಯ ಸಚಿವರು ಹಾಲಿನ ಉತ್ಪಾದಕರ ಮನವಿಯನ್ನು ಇ ಒಪ್ಪಿಕೊಂಡು ಒಂದಂ ಲೀಟರಿಗೆ ೨ಱ ಪೈಸೆ ಜಾಸ್ತಿ ಮಾಡಿದ್ದಾರೆ. ಆದರೆ ಇದು ಕಡಿಮೆಂ ಆಯಿತು ಎಂದು ಹಾಲಿನ ಉತ್ಪಾದಕರು ಹೇಳಿದ್ದಾರೆ. ಆದ್ದರಿಂದ ಮತ್ತೆ ಕೆಲವು ದಿವಸಗಳಾದ ಮೇಲೆ ಮಂತ್ರಿ ಹಾಲಿನ ಬೆಲೆಯನ್ನು ಜಾಸ್ತಿ ಮಾಡಬೇಕು. ಮಿಲ್ಕ್ ಪೌಡರ್ ಮಾರ್ಕೆಟಿಂಗ್ ಫೆಡರೇಷನ್ ರಚನೆ ಮಾಡಬೇಕು. ಪಶುಗಳ ಆಹಾರವನ್ನು ರೈತರಿಗೆ ನ್ಯಾಯವಾದ ಬೆಲೆಗೆ ಒದಗಿಸುವುದಕ್ಕೆ ಸರ್ಕಾರದವರು ವ್ಯವಸೆ ಮಾಡಬೇಕು. ಮತ್ತೊಮ್ಮೆ ಹಾಲಿನ ದರವನ್ನು ಪುನರ್‌ವಿಮರ್ಶೆ ಮಾಡಬೇಕು.

೧೦-೩೦ ಎ.ಎಂ.

† ಶ್ರೀ ಎಂ. ಶ್ರೀನಿವಾಸ್ (ಶ್ರೀರಂಗಪಟ್ಟಣ).—ಮಾನ್ಯ ಅಧ್ಯಕ್ಷರೇ, ಈಗತಾನೇ ಮಾನ್ಯ ಸಚಿವರು ತಮ್ಮ ಹೇಳಿಕೆಯಲ್ಲಿ ಹಾಲಿನ ಕೊಳ್ಳುವ ದರವನ್ನು ಹೆಚ್ಚಿಸಿರುವ ವಿಷಯವನ್ನು ತಿಳಿಸಿರುವುದು ನಿಜಕ್ಕೂ ರೈತರ ಪರವಾಗಿ ಇಟ್ಟ ಒಳ್ಳೆಯ ಹೆಜ್ಜೆ ಎಂದು ಹೇಳುತ್ತೇನೆ ಇವರು ಹೆಚ್ಚಿಸಿರುವ ೨೦ ಪೈಸೆಯಿಂದ ನಮ್ಮ ರೈತರು ತೃಪ್ತಿಯಾಗುತ್ತಾರೆ ಎಂಬ ಭಾವನೆ ನನಗೆ ಬಂದಿಲ್ಲ. ಆದರೂ ಕಳೆದ ಮೂರು ನಾಲ್ಕು ವರ್ಷದಿಂದ ಹಾಕದೇ ಇರುವ ದಿಟ್ಟ ಹೆಜ್ಜೆಯನ್ನು ಇಂದಿನ ಮಾನ್ಯ ಪಶುಸಂಗೋಪನಾ ಮಂತ್ರಿಗಳು ಹಾಕಿರುವುದರಿಂದ ರೈತರ ಪರವಾಗಿ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮನಸಾಕ್ಷಿಯಾಗಿ ನಾನು ಇದನ್ನು ಒಪ್ಪುವುದಿಲ್ಲ. ಮಾನ್ಯ ಮಂತ್ರಿಗಳು ಕಡಿಮೆ ದರವಿರುವ ಆಂಕಿ ಅಂಶಗಳನ್ನು ಮಾತ್ರ ಕೊಟ್ಟಿದ್ದಾರೆ. ಮಹಾರಾಷ್ಟ್ರ, ಪಶ್ಚಿಮ ಬಂಗಾಳದಲ್ಲಿ ಇರತಕ್ಕ ಹಾಲಿನ ದರವನ್ನು ಕೊಟ್ಟಿಲ್ಲ. ಇವತ್ತು ಏನು ಹಾಲಿನ ದರವನ್ನು ಹೆಚ್ಚು ಮಾಡಿದ್ದಾರೆ ಇದನ್ನು ಒಂದೆರಡು ತಿಂಗಳಲ್ಲೇ ಪುನರ್ ವಿಮರ್ಶೆ ಮಾಡಬೇಕಾದ ಅವಶ್ಯಕತೆ ಬರಬಹುದು. ಪಶು ಸಾಕಾಣಿಕೆಗೆ ಬೇಕಾದ ತೌಡು, ಇಂಡಿ, ಮುಂತಾದ ವಸ್ತುಗಳು ೧೯೬೬ನೇ ಇಸವಿಯಲ್ಲಿ ಯಾವ ದರದಲ್ಲಿ ಸಿಗುತ್ತಿತ್ತೋ ಅದೇ ದರದಲ್ಲಿ ಈಗಲೂ ಕೊಡುವಂತಿದ್ದರೆ ಈಗ ಹೆಚ್ಚಿಸಿರುವ ಹಾಲಿನ ದರವನ್ನು ಹೆಚ್ಚಿಸುವ ಅವಶ್ಯಕತೆಯೇ ಇರುತ್ತಿರಲಿಲ್ಲ. ಈಗ ಹೆಚ್ಚಿಸಿರತಕ್ಕ ೨೫ ಪೈಸೆಯು ಅವಶ್ಯಕತೆ ಇರುತ್ತಿರಲಿಲ್ಲ. ಈಗ ಎಲ್ಲಾ ವಸ್ತುಗಳ ಬೆಲೆಗಳೂ ಜಾಸ್ತಿಯಾಗಿವೆ. ಆದ್ದರಿಂದ ಏನೋ ಗ್ಯಾರಂಟಿ ಕೊಡುವ ರೂಪದಲ್ಲಿ ಕೊಡುತ್ತಿದ್ದೇವೆ ಎಂಬ ವಾತಾವರಣ ಸರ್ಕಾರಕ್ಕಿರುವುದು ಬೇಡ. ಇದು ರೈತರ ಹಕ್ಕು. It is the right on the part of the farmers to get the increase in price. ಎರಡನೆಯದಾಗಿ ಹೇಳುವುದಾದರೆ ಮಾನ್ಯ ಮಂತ್ರಿಗಳು ದಯವಿಟ್ಟು ಅಧಿಕಾರಿಗಳು ಹೇಳಿಂತ ಮಾತುಗಳನ್ನು ಕೇಳಬೇಡಿ. ಮುಂದಿನ ಫೆಡರೇಷನನ್ನು ಇಷ್ಟು ದಿವಸದಲ್ಲೇ ಮಾಡುತ್ತೇವೆಂಬುದನ್ನು ಸದನದಲ್ಲಿ ಹೇಳಬೇಕೆಂದು ಕೇಳಿಕೊಂಡು ಎರಡು ನಿಮಿಷ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ಎಜುಕೇಷನ್ ಡಿಮ್ಯಾಂಡ್ ಇದೆ. ಆದ್ದರಿಂದ ಚುಟುಕಾಗಿ ಮುಗಿಸಿ.

ಶ್ರೀ ಎ. ಲಕ್ಷ್ಮೀಸಾಗರ್.—ತಾವು ಅಧಿನಿಯಮ ೩೦ಟನ್ನು ನೋಡಿದ್ದೀರಾ ? ಅಧಿನಿಯಮ ೩೦ರ ಪ್ರಕಾರ ತಾವು ವಿತಕ್ಕೆ ನಡೆದುಕೊಳ್ಳುವುದಿಲ್ಲ ನಾನು ಮಾತನಾಡುವಾಗ ಬೇಗ ಮುಗಿಸಿ ಎಂದು ನೀವು ಹೇಳುತ್ತೀರಿ. ೩೦ಟನೇ ಅಧಿನಿಯಮಗಳಿಗನುಸಾರವಾಗಿ ತಾವು ಸಭೆಯ ಕಾರ್ಯಕಲಾಪಗಳನ್ನು ನಡೆಸದೇ ಹೋದರೆ ನಾವು ಯಾರ ಪತ್ತಿರ ಹೋಗಿ ಕುಂದುಕೊರತೆಗಳನ್ನು ಹೇಳಿಕೊಳ್ಳಬೇಕು ?

ಅಧ್ಯಕ್ಷರು.—ಎಜುಕೇಷನ್ ಡಿಮ್ಯಾಂಡ್ ಇದೆ, ಆದ್ದರಿಂದ ಬೇಗ ಮುಗಿಸಿ ಎಂದು ಹೇಳಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ನೀವು ದಯವಿಟ್ಟು ೩೦ನೇ ಅಧಿನಿಯಮವನ್ನು ನೋಡಿ. ದಯವಿಟ್ಟು ನೀವು ಪುಸ್ತಕ ಇಟ್ಟುಕೊಂಡು ನೋಡಿ. ಇಲ್ಲದೇ ಇದ್ದರೆ ಗೊತ್ತಾಗುವುದಿಲ್ಲ. ಆ ಪ್ರಕಾರ ನೀವು ನಡೆದುಕೊಳ್ಳುತ್ತಿದ್ದೀರಾ ನೋಡಿ. ನಾವು ಮಾತನಾಡುವಾಗ ನಿಯಮ, ನೀತಿ ಹೇಳುತ್ತೀರಿ .....

ಶ್ರೀ ಎಂ. ವೀರಪ್ಪ ಮೊಯಿಲಿ.—Sir, I raise a Point of order. ಮಾನ್ಯ ಲಕ್ಷ್ಮೀಸಾಗರ್ ಅವರು ಮಾತನಾಡಲು ನಿಂತಾಗ ತಾವು ಅನುಮತಿ ಕೊಟ್ಟಿರಿ. ಮುಂದಿನ ಕಾರ್ಯಕಲಾಪದ ವಿಚಾರದಲ್ಲಿ ಮುನ್ನೆಚ್ಚರಿಕೆಯನ್ನು ಸೌಜನ್ಯಯುತವಾಗಿ ಕೊಟ್ಟಿರಿ. ಯಾವಾಗಲೂ ಕೂಡ ಪಾರ್ಲಿಮೆಂಟರಿ ಪ್ರೊಸೀಜರ್ ವಿಚಾರದಲ್ಲಿ ಅಗ್ರ ಪಂಕ್ತಿಯಲ್ಲಿದ್ದು ಮಾರ್ಗದರ್ಶನ ಮಾಡುತ್ತಿದ್ದವರು ಇವತ್ತು ಏಕೋ ಒಂದು ರೀತಿಯಲ್ಲಿ ಮಾತನಾಡಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಈಗಲೂ ನಾನು ಅದನ್ನೇ ಮಾಡುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಲಕ್ಷ್ಮೀಸಾಗರ್ ಅವರು ಮಾತನಾಡುವಾಗ ತಮಗೆ ಅಂದರೆ ಮಾನ್ಯ ಅಧ್ಯಕ್ಷರಿಗೆ ನೀವು ಅಧಿನಿಯಮವನ್ನು ನೋಡಿ, ನೀವು ಆ ರೀತಿ ನಡೆದುಕೊಳ್ಳಿ ಎಂದು ತಮಗೆ ಹೇಳಿದ್ದು ಅಷ್ಟು ಸರಿಯಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.— ಕನ್ನಡದಲ್ಲಿ ಇನ್ಯಾವ ಶಬ್ದ ಇದೆ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾವು, ಮಾನ್ಯ ಅಧ್ಯಕ್ಷರು ಕುಳಿತುಕೊಂಡಿರುವ ಸ್ಥಾನಕ್ಕೆ ಮತ್ತು ತಮಗೆ ಸೌಜನ್ಯತೆ ಮತ್ತು ಗೌರವವನ್ನು ಕೊಂಡಿದಲ್ಲಿ ತಮ್ಮ ಇಡೀ ಸದನಕ್ಕೆ ತೋರಿಸಿದಂತಾಗುತ್ತದೆ, ಆದ್ದರಿಂದ ಅವರು ಮಾತನಾಡುವಾಗ 'ನೀವು ನೋಡಿ' 'ನೀವು ನಡೆದುಕೊಳ್ಳಿ' ಎಂದು ಹೇಳುವಂಥಾದ್ದು ಸಭೆಯ ಗೌರವಕ್ಕೆ ತಕ್ಕದಲ್ಲ. ಹಿರಿಯರಾದ ಲಕ್ಷ್ಮೀಸಾಗರ್ ಅವರು ಆ ರೀತಿ ಹೇಳಿದ್ದು ಸರಿಯಲ್ಲ ಎಂಬುದು ನನ್ನ ಕ್ರಿಯಾಲೋಪ. ಆದ್ದರಿಂದ ಮಾನ್ಯ ಅಧ್ಯಕ್ಷರಿಗೆ 'ನೀವು, ನೀವು' ಎಂದು ಹೇಳುವುದು ಸರಿಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ತಾವು ರೂಲಿಂಗ್ ಕೊಡೋಣವಾಗಲಿ.

ಶ್ರೀ ಬಿ.ಪಿ.ಡಿ. ಸಾಲಪ್ಪ.— 'ನೀವು' ಎಂಬುದರ ಬದಲು 'ತಾವು'' ಎಂದು ಹೇಳಬಹುದಾಗಿತ್ತು. ಅದನ್ನು ಮಾನ್ಯ ಸದಸ್ಯರೇ ತಿಳಿದುಕೊಂಡು ಮಾತನಾಡಬಹುದು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರು ಉದಾರ ಮನೋಭಾವನೆಯಿಂದ ರೈತರ ಸಮಸ್ಯೆ ಬಗ್ಗೆ ಮಾತನಾಡಲು ಅವಕಾಶ ಕೊಟ್ಟಿದ್ದಾರೆ. ಇದನ್ನೆ ದೊಡ್ಡದು ಮಾಡಿಕೊಂಡು ಹೀಗೆ ಹೋಗುವುದು ಸರಿಯಲ್ಲ. ರೈತರ ವಿಷಯ ಬಂದಾಗ ರೂಲ್ಸ್ ಪ್ರಕಾರವೇ ಹೋಗಬೇಕು ಎಂದು ಹೇಳುವುದು ಬೇಡ. ಎಷ್ಟೋ ಸಲ ರೂಲ್ಸ್ ಬಿಟ್ಟು ಕೆಲವು ವಿಷಯಗಳು ಬಂದಾಗ ನಡೆದುಕೊಂಡಿರುವ ನಿದರ್ಶನ ಇದೆ. ಆದ್ದರಿಂದ ಇದನ್ನೇ ದೊಡ್ಡದು ಮಾಡಿಕೊಂಡು ಹೋಗುವುದು ಸರಿಯಲ್ಲ ಎಂದು ಮಾನ್ಯ ಅಧ್ಯಕ್ಷರ ಮೂಲಕ ಪ್ರಾರ್ಥಿಸಿಕೊಳ್ಳುತ್ತಿದ್ದೇನೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ರೈತರ ಬಗ್ಗೆ ವಿರೋಧ ಮಾಡುವುದಾದರೆ ನಾನು ಹೇಳುತ್ತೇನೆ, ಇವತ್ತು ರೈತರು ಒಗ್ಗಟ್ಟಾದರೆ ಅದರ ಮುಂದೆ ಕೋಟಿಗಟ್ಟಲೆ ಹಣ, ಲಕ್ಷಗಟ್ಟಲೆ ಸೈನ್ಯ ತೃಣ ಮಾತ್ರವಾಗುತ್ತದೆ. ತಲೆತಲಾಂತರದಿಂದ ದೇಶಕ್ಕೋಸ್ಕರ, ದೇಶಕ್ಕೆ ಅನ್ನ ಕೊಡುವುದಕ್ಕೋಸ್ಕರ ದುಡಿದವರು ರೈತರು ಆದ್ದರಿಂದ ರೈತರ ಪ್ರಶ್ನೆ ಬಂದಾಗ ಅದನ್ನು ವಿರೋಧ ಮಾಡುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ರೈತರ ಶಕ್ತಿಯಿಂದೆ ಅವರು ಎದ್ದು ನಿಂತರೆ ಲಕ್ಷಗಟ್ಟಲೆ ಸೈನ್ಯ, ಕೋಟಿಗಟ್ಟಲೆ ಹಣ ತೃಣ ಮಾತ್ರ. ರೈತರ ಸಮಸ್ಯೆ ಬಂದಾಗ ಯಾರೇ ಆಗಲಿ ಇಷ್ಟೊಂದು ಹಗುರವಾಗಿ ಮಾತನಾಡಬಾರದು.

ಅಧ್ಯಕ್ಷರು.—ಎಜುಕೇಷನ್ ಡಿಮ್ಯಾಂಡ್ ಇರುವುದರಿಂದ ಜಾಗ್ರತೆ ಮುಗಿಸಿ ಎಂದು ನಾನು ಹೇಳಿದೆ. ಮಾನ್ಯ ಲಕ್ಷ್ಮೀಸಾಗರ್ ಅವರ ಮನಸ್ಸನ್ನು ನೋಯಿಸಬೇಕು, ಅವರ ಹಕ್ಕನ್ನು ಪೊಟಕು ಮಾಡಬೇಕು ಎಂಬ ಉದ್ದೇಶದಿಂದ ನಾನೇನೂ ಹೇಳಲಿಲ್ಲ. ಇದನ್ನು ಮಾನ್ಯ ಸದಸ್ಯರು ದಯವಿಟ್ಟು ಅರ್ಥ ಮಾಡಿಕೊಳ್ಳಬೇಕು. ನನಗೂ ರೂಲ್ಸ್ ಗೊತ್ತಿದೆ. ಮಾನ್ಯ ಜಯದೇವರಾಜ ಅರಸುರವರು ಒಂದೆರಡು ವಿಷಯ ಮಾತನಾಡುತ್ತೇನೆಂದಾಗ ನಾನು ಅವರಿಗೂ ಹೇಳಿದೆ. ಅವರನ್ನೇನೂ ಮಾತನಾಡುವುದಕ್ಕೆ ಅಡ್ಡಿ ಮಾಡಲಿಲ್ಲ. ನೀವು ಅಂದರೆ ಶ್ರೀ ಎ. ಲಕ್ಷ್ಮೀಸಾಗರ್ ಅವರು ಒಳ್ಳೆಯ ಪಾರ್ಲಿಮೆಂಟೇರಿಯನ್ ನೀವೇ ಹೀಗೆ ಮಾಡಿದರೆ ಹೇಗೆ ಹೇಳಿ ?

ಶ್ರೀ ಎ. ಲಕ್ಷ್ಮೀಸಾಗರ್.—ತಮ್ಮ ಸರ್ಟಿಫಿಕೇಟ್ ನನಗೆ ಬೇಕಾಗಿಲ್ಲ. ಮಾನ್ಯ ಮೊಯಿಲಿಯವರ ಸರ್ಟಿಫಿಕೇಟೂ ಬೇಕಾಗಿಲ್ಲ. ಮಾನ್ಯ ಹನುಮೇಗೌಡರ ಬೆದರಿಕೆಯೂ ಬೇಕಾಗಿಲ್ಲ. ಅಥವಾ ಅವರ ಬೆದರಿಕೆಯಿಂದ ನನಗೇನೂ ಆಗುವುದಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ.—ನಾನು ಬೆದರಿಕೆ ಮಾಡಲಿಲ್ಲ. ಕೆಲಸಕ್ಕೆ ಬಾರದ ವಿಚಾರಗಳನ್ನು, ಅಸಂಬದ್ಧ ವಿಚಾರಗಳನ್ನು ಗಂಟೆಗಟ್ಟಲೆ ಚರ್ಚೆ ಮಾಡುವುದಕ್ಕಾಗುತ್ತದೆ, ರೈತರ ಸಮಸ್ಯೆ ಬಂದಾಗ ತಾಳ್ಮೆಯಿಂದ ಕೇಳುವುದಕ್ಕಾಗುವುದಿಲ್ಲವೇ ? ಈ ರೀತಿ ಮಾಡಿದರೆ ರೈತರ ಕಟು ವಿರೋಧಿಗಳು ಎಂದು ಹೇಳಬೇಕಾಗುತ್ತದೆ. ಎಲ್ಲಾ ಶಕ್ತಿ ಮೀರಿ ಹೇಳುವ ಶಕ್ತಿ ನಮಗಿದೆ ಈಗ ರೈತರು ಎಮ್ಮನಿಂದಿದ್ದಾರೆ. ಈ ಶಕ್ತಿಯನ್ನು ಬೇರೆ ಯಾವ ಶಕ್ತಿಯೂ ತಡೆಯುವುದಕ್ಕಾಗುವುದಿಲ್ಲ.

SRI K. B. SHIVAIAH.— He is not opposing. He wanted to say somthing. ಆದ್ದರಿಂದ ಸಮ್ಮನೆ ಅವರ ಮೇಲೆ ಈ ರೀತಿ ರಿಮಾರ್ಕ್ಸ್ ಪಾಸ್ ಮಾಡುವುದು ಸರಿಯಲ್ಲ.

ಶ್ರೀ ಮಳ್ಳೂರ ಆನಂದರಾವ್.—ಬೆಳಗ್ಗೆ ಎದ್ದು ಬಂದಕೂಡಲೇ ಇದ್ದಕ್ಕಿದ್ದಹಾಗೆ ಈ ರೀತಿ ವಿತಕ್ಕ್ಯಾಯಿತೋ ಗೊತ್ತಿಲ್ಲ. ಬೆಳಗ್ಗೆ ಅಜೀಜ್ ಸೇಠ್‌ರವರದ್ದು ಪುರುವಾಯಿತು ಈಗ ಇನ್ನೊಂದು ಸರದಿ ಲಕ್ಷ್ಮೀಸಾಗರ ವರದಾಗಿದೆ. ಮಾನ್ಯ ಲಕ್ಷ್ಮೀಸಾಗರ್ ಅವರಿಗೆ ಹೇಳುತ್ತೇನೆ. 'ನೀವು' ಎನ್ನುವ ಬದಲು 'ತಾವು' ಎಂದು ಉಪಯೋಗಿಸಬಹುದಾಗಿತ್ತು. ತಾವು ಎಂದು ಸಂಭೋದನೆ ಮಾಡಿದರೆ ತಪ್ಪೇನೂ ಇಲ್ಲ. ಅದು ಒಳ್ಳೆಯ ಪದ. 'ನೀವು' ಎಂದು ಉಪಯೋಗಿಸಿದ್ದಕ್ಕೆ ಮಾನ್ಯ ವೀರಪ್ಪ ಮೊಯಿಲಿಯವರು ಆಕ್ಷೇಪಣೆ ಎತ್ತಿದರು. ಮಾನ್ಯ ಹನುಮೇಗೌಡರು ಬಾಣ ಹಿರಿಸು ಹೊಡೆದರು. ಸ್ನೇಹಿತರಾದ ಮಾನ್ಯ ಲಕ್ಷ್ಮೀಸಾಗರ್ ಅವರಿಗೆ ಹೇಳುತ್ತೇನೆ, ಸದನಕ್ಕೆ ಬಂದ ಎರಡು-ಎರಡೂವರೆ ವರ್ಷದಲ್ಲಿ ತಾವು ಯಲ್ಲರಿಗಿಂತ ಹೆಚ್ಚಾಗಿ ಮಾತನಾಡಿದ್ದೀರಿ. ಬಹುಶಃ ರೆಕಾರ್ಡ್ ತೆಗೆಸಿ ನೋಡಿದರೆ ಗೊತ್ತಾಗುತ್ತದೆ. ನಮ್ಮೆಲ್ಲರಿಗಿಂತ ಹೆಚ್ಚಿಗೆ ಸಮಯವನ್ನು ಅವರು ತೆಗೆದುಕೊಂಡಿದ್ದಾರೆ. ಗಂಟೆಗಟ್ಟಲೆ ಮಾತನಾಡಿದ್ದಾರೆ. ಅವರು ಮಾತನಾಡಲಿ ನಾನು ಬೇಡ ಎಂದು ಹೇಳುವುದಿಲ್ಲ. ಅವರಿಗೆ ದೇವರು ಒಳ್ಳೆ ಶಕ್ತಿ ಕೊಟ್ಟಿದ್ದಾನೆ, ಮಾತನಾಡುವ ವಾಕ್‌ಚಾತುರ್ಯ ಕೊಟ್ಟಿದ್ದಾನೆ, ಇಂಗ್ಲೀಷಿನಲ್ಲಿ ಬಹಳ ಚೆನ್ನಾಗಿ ಮಾತನಾಡುತ್ತಾರೆ, ಅವರು ಲಾಯರ್ ಕೂಡ ಆಗಿರುವುದರಿಂದ ಚೆನ್ನಾಗಿ ಮಾತನಾಡುತ್ತಾರೆ. ಆದರೆ ಮಾನ್ಯ ಅಧ್ಯಕ್ಷರು ಬೇಗ ಮುಗಿಸಿ ಎಂದು ಹೇಳಿದತಕ್ಷಣ ಅವರ ಮೇಲೆ ಬೀಳುವ ಧಾಟಿಯಲ್ಲಿ ಮಾತನಾಡಿದ್ದು ಉಚಿತವಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಸದಸ್ಯರಾದ ಮಳ್ಳೂರು ಆನಂದರಾಯರು ಮತ್ತು ಮಂತ್ರಿಗಳಾದ ವೀರಪ್ಪ ಮೊಯ್ಲಿಯವರು ನಾನು ಮಾತನಾಡಿದ ಧಾಟಿ ಸರಿಯಿಲ್ಲ ಮತ್ತು ಮಾಡಿದ ಪದ ಪ್ರಯೋಗ ಸರಿಯಿಲ್ಲ ಎಂದು ಗಂಭೀರವಾದ ಮಾತನ್ನು ತಮ್ಮ ಅಪಗಾಹಸಿಗೆ ತಂದಿದ್ದಾರೆ. ನಾನು ಈ ಸದನ ನಿಯಮಾವಳಿಗನುಸಾರವಾಗಿ, ಈ ಸಭೆಯ ಕಾರ್ಯಕಲಾಪಗಳಿಗನುಸಾರವಾಗಿ ನಡೆದಿಲ್ಲ ಎನ್ನುವ ಮಾತನ್ನು ಆಕ್ಷೇಪಣಾ ಪೂರ್ವಕವಾಗಿ ನನ್ನ ಅಭಿಪ್ರಾಯವನ್ನು ತಿಳಿಸಿದ್ದೇನೆ. ಆದರಲ್ಲಿ ತಾವು, ನೀವು ನಾನು ಕೂಡ ಸ್ವಲ್ಪಮಟ್ಟಿಗೆ ಕನ್ನಡವನ್ನು ಓದಿದ್ದೇನೆ ಎನ್ನುವ ವಿಷಯವನ್ನು ವಿನಯಪೂರ್ವಕವಾಗಿ ಆನಂದರಾಯರಿಗೆ ಮತ್ತು ಮೊಯ್ಲಿಯವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರು ಎಷ್ಟರಮಟ್ಟಿಗೆ ಕನ್ನಡದಲ್ಲಿ ಪ್ರಾವೀಣ್ಯತೆಯನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಿದ್ದಾರೋ; ಓದುವುದಕ್ಕೆ ಪ್ರಯತ್ನ ಮಾಡಿದ್ದಾರೋ ; ಅದಕ್ಕಿಂತ ಕಡಿಮೆ ಏನು ನಾನು ಓದಿಲ್ಲ. ಆದ್ದರಿಂದ ಪದ ಪ್ರಯೋಗದಲ್ಲಿ ವ್ಯಾಕರಣ ರೀತಿಯಲ್ಲಿ, ಸಾಹಿತ್ಯ ರೀತಿಯಲ್ಲಿ ಏನಾದರೂ ಹೆಚ್ಚು ಕಡಿಮೆ ಇದ್ದರೆ ತರಿಸಿನೋಡಿ; ನಾನು ಶಿರಸಾವಂದಿಸುತ್ತೇನೆ. ಇದು ಒಂದು ಭಾಗ. ಮತ್ತೆ ಆನಂದರಾಯರು ಮಾತನಾಡುತ್ತಾ, ತಾನು ಈ ಸದನದಲ್ಲಿ ಬಹುಭಾಗದ ಸಮಯವನ್ನು ತೆಗೆದುಕೊಂಡಿದ್ದೇನೆಂದು ಹೇಳಿದರು. ಈ ಅಧಿವೇಶನದ ಮುಂಗಡ ಪತ್ರದ ಚರ್ಚೆಯ ಮೇಲೆ ನಂತರ ಬೇಡಿಕೆಗಳ ಚರ್ಚೆಯ ಮೇಲೆ ಭಾಗವಹಿಸಿದ್ದನ್ನು ಯಾರಾದರೂ ನೋಡಿದ್ದಾರೆಯೆ ? ಆನಂದರಾಯರು ಅಪರೂಪಕ್ಕೆ ಈ ಸಭೆಗೆ ಬರತಕ್ಕಂಥಾದ್ದು. ನಿನ್ನೆ ಬಹಳ ಗಹನವಾದ-ವಿಚಾರ ಬಂದಿದ್ದರೂ ಕೂಡ ನಾನು ಮಾತನಾಡಲ್ಲಿಲ್ಲ. ತಕರಾರು ಕೂಡ ನಾನು ತೆಗೆಯುವುದಕ್ಕೆ ಇಷ್ಟಪಡಲಿಲ್ಲ. ಇದು ಇನ್ನೊಂದು ಭಾಗ. ಮತ್ತೆ ಮಾನ್ಯ ಸದಸ್ಯರಾದ ಹನುಮೇಗೌಡರು ಏನು ತಿಳಿದುಕೊಂಡಿದ್ದಾರೆ, ರೈತರ ಹಿತಾಸಕ್ತಿಯನ್ನು ನಾವಿಗೆ ಗುತ್ತಿಗೆ ಕೊಟ್ಟಿದ್ದಾರೆಂದು ತಿಳಿದುಕೊಂಡಿದ್ದಾರೆ.

ಶ್ರೀ ಕೆ. ಜೆಚ್. ಹನುಮೇಗೌಡ.—ನೀವು ಮಸಸ್ಸಿಗೆ ಬಂದಹಾಗೆ ಮಾತನಾಡಬೇಡಿ.

ಶ್ರೀ ಎ. ಲಕ್ಷ್ಮೀಸಾಗರ್.—ತಾವು ಯಾರಿಗೆ ಅವಕಾಶಕೊಟ್ಟಿದ್ದೀರಿ ? ಅವರು ಮಾತನಾಡುತ್ತಿರುವಾಗ ನಾನು ಅವರಿಗೆ ಅಡ್ಡಿ ಮಾಡಿಲಿಲ್ಲ.

ಶ್ರೀ ಕೆ. ಜೆಚ್. ಹನುಮೇಗೌಡ.—ನಿಮಗೆ ಇರುವಷ್ಟು ಹಕ್ಕು ನನಗೂ ಇದೆ. ಇಷ್ಟು ಸುಲಭವಾಗಿ ಮಾತನಾಡುವುದಕ್ಕೆ ಜೋರದರೆ ವ್ಯವಹಾರ ಸರಿಯಾಗಿ ಇರುವುದಿಲ್ಲ. ಸ್ವಲ್ಪ ಇತಿ ಮಿತಿ ಇಟ್ಟು ಕೊಂಡು ಮಾತನಾಡಿ. ಬೆಳ್ಳಬಸ್ತಿಯಲ್ಲಿಟ್ಟಿದ್ದಕ್ಕೆ ಇಂದು ಮಾತನಾಡಿ ನಾನು ರೈತರ ಮನೆಯಿಂದ ಬಂದಿರ ತಕ್ಕವನು, ಇಲ್ಲಿ ಬೇರೆ ವಿಷಯಗಳನ್ನು ತೆಗೆದುಕೊಂಡು ರೈತರ ಬಗ್ಗೆ ಮಾತನಾಡುವುದಕ್ಕೆ ನಿಮಗೆ ಆಗುವುದಿಲ್ಲ. ಕೆಲಸಕ್ಕೆ ಬಾರದೇ ಇರತಕ್ಕ ವಿಷಯಗಳನ್ನು ತಂದು ಇಲ್ಲಿ ಗಂಟೆಗಟ್ಟಲೇ ಮಾತನಾಡುವುದಕ್ಕೆ ಆಗುತ್ತೆ. ರೈತರ ಬಗ್ಗೆ ಹಗುರವಾಗಿ ಮಾತನಾಡಿದರೆ ಬಹಳ ಪರಿಣಾಮ ಎದುರಿಸಬೇಕಾಗುತ್ತದೆ.

SRI B. BASAVALINGAPPA.—Sir, when a member is permitted to speak, he has got every right to speak. I think that is a right conceded by the House as well as by you also. When Sri Lakshmisagar is on his legs, Sri Hanume Gowda interfered and spoke. Why should he be allowed to speak ? I request the Chair to control the House and see that other hon. Members will not interfere when an hon. Member is speaking with due permission of the Speaker.

MR. SPEAKER.—Whenever a member is speaking after obtaining the permission of the Chair, no other member should rise and speak. I request the hon. Members to strictly adhere to this.

ಶ್ರೀ ವಿ. ಮುನಿಯಪ್ಪ.— ಸ್ವಾಮಿ, ಮಾನ್ಯ ಲಕ್ಷ್ಮೀಸಾಗರ್‌ರವರು ಮಾತನಾಡುತ್ತಾ ; ಹನುಮೇಗೌಡರು ರೈತರ ಹಿತಾಸಕ್ತಿಯನ್ನು ಗುತ್ತಿಗೆಗೆ ತೆಗೆದುಕೊಂಡಿದ್ದಾರೆಂದು ಹೇಳಿದರು. ನಾನು ಇದಕ್ಕೆ ಆಕ್ಷೇಪಣೆ ಮಾಡುತ್ತೇನೆ. ಈ ಸಭೆಯಲ್ಲಿ ಯಾರೇ ಸದಸ್ಯರಾದರೂ ಯಾವುದೇ ವಿಷಯದ ಬಗ್ಗೆ ಮಾತನಾಡುವುದಕ್ಕೆ ಹಕ್ಕು ಇದೆ. ಒಂದು ಲಕ್ಷ ಪುಜೆಗಳ ಪ್ರತಿನಿಧಿಗಳಾಗಿ ಬಂದಿದ್ದಾರೆ, ಇದಕ್ಕು ಬಹುಶಃ ಎಲ್ಲರೂ ಒಪ್ಪುತ್ತಾರೆಂದು ನಾನು ತಿಳಿದಿದ್ದೇನೆ. ಮಾನ್ಯ ಲಕ್ಷ್ಮೀಸಾಗರ್‌ರವರು ಈ ಸದನದಲ್ಲಿ ಅನೇಕ ಸಂದರ್ಭದಲ್ಲಿ ಬೆಂಗಳೂರು ನಾಗರೀಕರ ಪರವಾಗಿ ಹೇಳಿರತಕ್ಕಂಥಾದ್ದು, ಪ್ರೋಸೀಡಿಂಗ್ಸ್‌ನಲ್ಲಿದೆ. ಇಂಥ ಸಂದರ್ಭದಲ್ಲಿ ರೈತರ ಪರವಾಗಿ ವಿಚಾರಗಳನ್ನು ಹೇಳುವಾಗ ಅಬ್ಜೆಕ್ಷನ್ ತೆಗೆಯತಕ್ಕಂಥಾದು ಸರಿಯಲ್ಲವೆಂದು ಹೇಳುತ್ತೇನೆ.

ಶ್ರೀ ಮಳ್ಳೂರು ಆನಂದರಾವ್.—ನಮ್ಮ ಬಗ್ಗೆ ಮತ್ತು ಕನ್ನಡದ ಬಗ್ಗೆ ಪ್ರಾಮ್ಯಾನಸಮಾಡಿ ಹೇಳಿ ಹ್ಯಾದ್ದಾರೆ. ಈ ಸದನಕ್ಕೆ ಮಣ್ಣು ಹೊತ್ತಿರುವವರು ಬಹಳ ಜನ ಇದ್ದಾರೆ. ಹತ್ತಿಪ್ಪತ್ತು ವರ್ಷಗಳಿಂದ ಇದ್ದಾರೆ, ನಾನು ಕೂಡ ೭-೮ ವರ್ಷಗಳಿಂದ ಕೂತಿದ್ದೇನೆ. ಅದಕ್ಕೊಸ್ಕರ ನಾನೇ ಸರ್ವಸ್ವ, ರೂಲ್ಸ್, ರೆಗ್ಯೂಲೇಷನ್‌ಗಳನ್ನು ನಾನೇ ತಿಳಿದುಕೊಂಡಿರುವುದು. ನನಗೇ ಗೊತ್ತಿರುವುದು ಎಂದು ತಿಳಿದುಕೊಂಡಹಾಗೆ ಆದು ಯಾವುದೇ ವ್ಯಕ್ತಿಯ ಅಹಂಕಾರದ ಪರಮಾವಧಿಯಾಗುತ್ತೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಏನು ಪ್ರಸ್ತಾಪ ಮಾಡಿದ್ದೇನೆ, ಆದು ಕಾನೂನಿಗೆ ವಿರುದ್ಧವಾಗಿಲ್ಲ, ಮತ್ತು ನಿಯಮಾವಳಿಗೆ ವಿರುದ್ಧವಾಗಿಲ್ಲ. ಪದ ಪ್ರಯೋಗ ಇಷ್ಟವಿಲ್ಲದೇ ಇರಬಹುದು. ಒಬ್ಬರ ಇಷ್ಟದಮೇಲೆ ನಿಯಮಾವಳಿ ಪ್ರಕಾರ ಸಂಪ್ರದಾಯ ಇಲ್ಲವೇ ಇಲ್ಲ. ಎಲ್ಲಾ ತಿಳಿದುಕೊಂಡಿದ್ದೇನೆ ನಾನೇ ಬ್ರಹ್ಮ, ಪರಬ್ರಹ್ಮ ಎಂದು ನಾನು ಹೇಳಲಿಲ್ಲ ತಾವು ಕೂಡ ಬೇರೆ ಸದನದಲ್ಲಿ ಸದಸ್ಯರಾಗಿದ್ದೆ, ಎಲ್ಲಾ ತಿಳಿದುಕೊಂಡಿದ್ದೇನೆಂದು * ಪಡಬೇಡಿ. ನನ್ನ ಹಕ್ಕುಬಾಧ್ಯತೆಗೆ ಚ್ಯುತಿ ಬಂದಾಗ, ತನ್ನ ಹಕ್ಕು ಭಾದ್ಯತೆಯನ್ನು ರಕ್ಷಣೆ ಮಾಡತಕ್ಕಂಥ ಶಕ್ತಿ ಇದೆ, ಇಷ್ಟು ಮಾತ್ರ ಹೇಳುತ್ತದಕ್ಕೆ ನಾನು ಹೊರಟಿದ್ದೇನೆ.

ಶ್ರೀ ಮಳ್ಳೂರು ಆನಂದರಾವ್.—ಪದಗಳನ್ನು ಪ್ರಯೋಗ ಮಾಡಬೇಕೆಂದರೆ ಎಷ್ಟು ಬೇಕಾದರೂ ಮಾಡಬಹುದು.

ಶ್ರೀ ಎ. ಲಕ್ಷ್ಮೀಸಾಗರ್.—ಎಲ್ಲರೂ ಮಾಡಬಹುದು.

ಅಧ್ಯಕ್ಷರು.—ಆ ವಿಚಾರ ಬಿಡಿ ಸ್ವಾಮಿ.

ಶ್ರೀ ಎ. ಲಕ್ಷ್ಮೀಸಾಗರ್.—ಯಾವ ವಿಚಾರ ? ಸ್ವಾಮಿ, ದಯವಿಟ್ಟು ತಾವು ಆಲಿಸಬೇಕು. ನನ್ನ ಅಭಿಪ್ರಾಯ ಹೇಳುವುದಕ್ಕೆ ತಾವುಗಳೆಲ್ಲಾ ಸೇರಿ ಏತಕ್ಕೆ ಬಾಯಿ ಮುಚ್ಚಿಸುವುದಕ್ಕೆ ಪ್ರಯತ್ನ ಮಾಡುತ್ತೀರಿ ? ನಾನು ಮಾಡಿರತಕ್ಕಂಥ ತಪ್ಪೇನು ? ನಾನು ಸದನದಲ್ಲಿ ಸುಮ್ಮನಿರಬಾರದು ಎಂದು ಆದೇಶ ಕೊಟ್ಟರೆ ನಾನು ಹೋಗಿಬಿಡ್ತೇನೆ. ಮಾನ್ಯ ಹನುಮೇಗೌಡರು ಪದ ಪ್ರಯೋಗಗಳನ್ನು ಮಾಡಿದ್ದು ಕೇಳಿದ್ದೀರಾ ?

* As ordered by the Chair the words are expunged.

ಶ್ರೀ ಬಸವರಾಜ ಪೆಜ್. ಪಾಟೀಲ್.—ವೈಯಕ್ತಿಕ ವಿಚಾರಗಳನ್ನು ಈ ಸದನದಲ್ಲಿ ಹೇಳುವುದಕ್ಕೆ ಏತಕ್ಕೆ ಅವಕಾಶಕೊಡುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಈ ಸಭೆಯಲ್ಲಿ ಯಾವುದೇ ವಿಷಯದ ಮೇಲಾಗಲೀ ಅಭಿಪ್ರಾಯಂ ವ್ಯಕ್ತಪಡಿಸುವುದಕ್ಕೆ ಪ್ರತಿಯೊಬ್ಬರಿಗೂ ಅವಕಾಶ ಇದೆ. ನನ್ನ ಅಭಿಪ್ರಾಯವನ್ನು ನಾನು ತಮ್ಮ ಮುಂದೆ ವ್ಯಕ್ತಪಡಿಸುವುದಕ್ಕೆ ಮೊದಲೇ, ನನ್ನ ಮೇಲೆ ಗಾಳಿ ಸುದ್ದಿ, ಈ ಸಭೆಯಲ್ಲಿ ಮರ್ಯಾದೆಯಿಂದ ಉಪಯೋಗ ಮಾಡಬೇ ಇರತಕ್ಕ ಪದಗಳನ್ನು ಶ್ರೀಮಾನ್ ಪನುಮೇಗೌಡರು ಬಳಸಿದ್ದಾರೆ. ಅವರು ಏನು ವಿಚಾರವನ್ನು ಹೇಳಿದ್ದಾರೆ ಎನ್ನುವುದನ್ನು ಹೇಳಬೇಕೋ ಬೇಡವೋ ತಾವೇ ಯೋಚನೆ ಮಾಡಿ.

ಅಧ್ಯಕ್ಷರು.—ಅನ್ ಪಾರ್ಲಿಮೆಂಟರಿ ಪದಗಳನ್ನು ಉಪಯೋಗಿಸಿದ್ದರೆ ; ಅದನ್ನು ತೆಗೆಸಿ ಹಾಕುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಶ್ರೀ ಜಯದೇವರಾಜ ಅರಸ್ ; ಶ್ರೀ ಚೌಡಯ್ಯನವರು ತಮ್ಮ ಅಭಿಪ್ರಾಯಗಳನ್ನು ಸಭೆಯಮುಂದಿಟ್ಟಿದ್ದಾರೆ. ಅದು ಪೌಬೋ ಅಲ್ಲವೋ ? ನನ್ನ ಅಭಿಪ್ರಾಯವನ್ನು ಇಡುವುದಕ್ಕೆ ಮೊದಲೇ, ಪೂರ್ವಭಾವಿಯಾಗಿ ಮನಸ್ಸನ್ನು ಸಿದ್ಧ ಮಾಡಿ, ಎಲ್ಲರೂ ಎದ್ದು ಧಾಳಿ ನಡೆಸಿರತಕ್ಕ ಸನ್ನಿವೇಶ ಇದೆ. ಅವರು ಏನು ಹೇಳಿದ್ದಾರೆ ; ರೈತರ ವಿರೋಧಿಯಾಗಿ ಮಾತನಾಡಿದರೆ ಕೋಟಿಗಟ್ಟಲೆ ಹಣ ತಂದು ಬಲಿಹಾಕುತ್ತೀವೆ ; ಬೆಂಗಳೂರಿನಲ್ಲಿ ಏನೋ ಕೆಲಸ ಮಾಡಿಕೊಂಡು ಈ ರೀತಿಯಾಗಿ ರೈತರ ಬಗ್ಗೆ ಮಾತನಾಡುವುದಕ್ಕೆ ಅಧಿಕಾರ ಇಲ್ಲ ಎನ್ನುವಂತ ಮಾತುಗಳನ್ನು ಅವರು ಹೇಳಿರುವುದನ್ನು ನಾನು ಕೇಳಿದ್ದೇನೆ.

ಶ್ರೀ ಕೆ. ಹೆಜ್. ಹನುಮೇಗೌಡ.—ನಾನು ರೈತರ ಪಕ್ಷ ಆಜೀಯವಾದುದು ; ಅವರ ಮುಂದೆ ಕೋಟಿಗಟ್ಟಲೆ ಹಣ, ಲಕ್ಷಗಟ್ಟಲೇ ಸೈನ್ಯ ತೃಣಮಾತ್ರ ಅಂತ ಹೇಳಿದ್ದೇನೆ.

ಅಧ್ಯಕ್ಷರು.—ವೈಯಕ್ತಿಕವಾಗಿ ಏನು ಹೇಳುವುದಕ್ಕೆ ಹೋಗಬೇಡಿ. ವಿಷಯದ ಮೇಲೆ ಹೋಗಿ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ನಾನು ಎರಡು ವಿಚಾರಗಳನ್ನು ಸರ್ಕಾರದ ಮುಂದೆ ಇಡುವುದಕ್ಕೆ ಇಚ್ಛಿಸುತ್ತೇನೆ. ಮೊದಲನೆಯದು ಕರ್ನಾಟಕ ರಾಜ್ಯ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬಗ್ಗೆ ಹೇಳುತ್ತೇನೆ.

The Karnataka Dairy Development Corporation constituted a sub-committee which included some Presidents of the Milk Producers' Union, to go into the question and make its recommendations. I should like to know Mr. Speaker, whether the consumers' representatives have also been consulted in the fixation of price and selling price of milk in Bangalore City and other cities ? This is point number one. Another clarification is : you have said : "However it is not possible to ignore the fact that the operations resulted in a susbstantial loss of nearly two crores of rupees which has to be subsidised from general revenue". What action or steps the Govt. has taken to revamp the operations of this concern to reduce the loss which would help in supplying the milk to the consumers at a reasonably low price ? The last and third point. My submission is that I have said that the price of milk should not be revised just like the producers have a case for revision of the procurement of price of milk. and selling price of milk Similarly I have a point on behalf of the consumers that this fact also must be kept in mind before the

fixation of price of milk, so far as the consumers are concerned. These are the points which I wanted to make. In the meanwhile all this halloo-balloo took place.

ಶ್ರೀ ಗೋವಿಂದ ಪಿ. ಪಡೆಯರಾಜ್.—ಮಾನ್ಯ ಅಧ್ಯಕ್ಷರೇ, ಶ್ರೀ ಲಕ್ಷ್ಮೀಸಾಗರ್‌ರವರು ಮಾತ ನಾಡುತ್ತಾ ಒಂದು ಶಬ್ದವನ್ನು ಉಪಯೋಗಿಸಿದ್ದಾರೆ, ಅದು ಇನ್ ಪಾರ್ಲಿಮೆಂಟರಿ ಆಗದೇ ಇರಬಹುದು. ಆದರೂ ಈ ಸಭೆಯ ಸಭ್ಯ ಸಂಪ್ರದಾಯವನ್ನು ಕಾಪಾಡುವ ದೃಷ್ಟಿಯಿಂದ ಆ ಶಬ್ದವನ್ನು ಕಡತದಿಂದ ತೆಗೆದು ಹಾಕಬೇಕೆಂದು ಕೇಳಿಕೊಳ್ಳುತ್ತೇನೆ

ಅಧ್ಯಕ್ಷರು.—ನಾನು ನೋಡಿ ತೆಗೆಸಿ ಹಾಕುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಒಂದು ಕ್ರಿಯೋಲೋಪವನ್ನು ಏತ್ತುತ್ತೇನೆ ಅದೇನೆಂದರೆ ಮಾನ್ಯ ಸದಸ್ಯರಾದ ಶ್ರೀ ಮಳ್ಳೂರು ಆನಂದರಾಯರು ಅಹಂಕಾರದ ಪ್ರವೃತ್ತಿ ಒಳ್ಳೆಯದಲ್ಲ ಎನ್ನುವ ಶಬ್ದವನ್ನು ಉಪಯೋಗಿಸಿದ್ದಾರೆ. ನಾನು ದುರಹಂಕಾರದಲ್ಲಿ ವರ್ತನೆ ಮಾಡತಕ್ಕದ್ದು ಸರಿಯಲ್ಲ ಎಂದು ಹೇಳಿದ್ದೇನೆ. ಅಹಂಕಾರ, ದುರಹಂಕಾರ, ಅಹಂ ಎನ್ನುತಕ್ಕ ಗುಣ ಪ್ರತಿಯೊಬ್ಬ ಮನುಷ್ಯನಲ್ಲಿಯೂ ಇದೆ ಎಂದು ತಾತ್ವಿಕರೆಲ್ಲರೂ ಹೇಳಿದ್ದಾರೆ. ಇದರ ಪರಮಾವಧಿ ದುರಹಂಕಾರವಾಗುತ್ತದೆ. ಆ ಅಭಿ ಪ್ರಾಯದಲ್ಲಿ ನಾನು ಹೇಳಿದ್ದೇನೆ. ಈ ಪದ ಉಪಯೋಗಿಸಬಾರದು ಎಂದು ಸಂವಿಧಾನದಲ್ಲಿ ಎಲ್ಲಿ ಹೇಳಿದೆ ?

SPEAKER.—Please stick on to the subject, don't make personal reference otherwise. I have to adjourn the House.

ಶ್ರೀ ಮಳ್ಳೂರು ಆನಂದರಾವ್.—ನಾನು ಪದಗಳನ್ನು ಉಪಯೋಗಿಸಬೇಕಾದರೆ ಯೋಚನೆ ಮಾಡಿ ಉಪಯೋಗಿಸುತ್ತೇನೆ. ರೆಕಾರ್ಡ ತೆಗೆಸಿ ನೋಡಿ, ನಾನು ಮಾತ್ರ ಶ್ರೀ ಲಕ್ಷ್ಮೀಸಾಗರ್‌ರವರು ಅಹಂಕಾರದಿಂದ ಕೂಡಿದ್ದಾರೆಂದು ಹೇಳಲಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಯಾವ ವ್ಯಕ್ತಿಯನ್ನು ಕುರಿತು ಹೇಳಿಲ್ಲ. ಅವರನ್ನು ಕುರಿತು ಹೇಳಿಲ್ಲ ಕುಂಬಳಕಾಯಿ ಕಳ್ಳ ಅಂದರೆ ಏತಕ್ಕೆ ಹೆಗಲಮುಟ್ಟಿ ನೋಡಿಕೊಳ್ಳಬೇಕು.

ಶ್ರೀ ಮಳ್ಳೂರು ಆನಂದರಾವ್.—ನಾನು ಹೆಳಿರುವುದನ್ನು ಕಡತದಿಂದ ತೆಗೆದುಹಾಕಿದರೂ ಚಿಂತೆ ಇಲ್ಲ. ನಾನು ಅವರಿಗೆ ನೇರವಾಗಿ ಹೇಳುವುದು ದುರಹಂಕಾರದ ಪರಮಾವಧಿ ಆಗುವುದು ಬೇಡ...

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಹೇಳುತ್ತಿರುವುದೇ ದುರಹಂಕಾರದ ಪರಮಾವಧಿಯನ್ನು ತೋರಿಸುತ್ತೆ.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಕೆಲವು ಸದಸ್ಯರುಗಳು ಸ್ಪಷ್ಟೀ ಕರಣ ಕೇಳಿದ್ದಾರೆ. ೨೫ ಪೈಸೆ ಇದ್ದದನ್ನು ೩೦ ಪೈಸೆ ಮಾಡಿರುವುದು ರಿಲೆವೆಂಟಾಗಿದೆ. ಶ್ರೀಮಾನ್ ಆರಸು ಅವರಿಗೆ ಗೊತ್ತಿದೆ. ಹಾಲಿನ ಡೈರಿಯವರು ಬಳಕೆದಾರರ ಮನೆ ಬಾಗಿಲಿಗೆ ತೆಗೆದುಕೊಂಡು ಹೋಗಿ ಹಾಲು ಕೊಡುತ್ತಿದ್ದಾರೆ ಪೆಟ್ರೋಲ್ ಬೆಲೆ ಜಾಸ್ತಿಯಾಗಿರುವುದರಿಂದ ಕಂಟ್ರಾಕ್ಟ್‌ಗಳನ್ನು ಕೂಡ ಜಾಸ್ತಿ ಮಾಡಿದ್ದಾರೆ. ಅದಕ್ಕೋಸ್ಕರ ಜಾಸ್ತಿ ಮಾಡಬೇಕಾಗಿ ಬಂದಿದೆ. ಬಳಕೆದಾರರ ದೃಷ್ಟಿ ಯಿಂದ ೧-೨ ಕೋಟಿ ರೂಪಾಯಿಗಳನ್ನು ಸಬ್ಸಿಡಿ ಕೊಡುತ್ತಿದ್ದೇವೆ. ಪ್ರೊಡ್ಯೂಸರ್ಸ್ ಲೆಕ್ಕ ತೆಗೆದು ಕೊಂಡರೆ ಬಹಳ ಕಷ್ಟಕ್ಕೆ ಬರುತ್ತೆ

ಶ್ರೀ ಎ. ಲಕ್ಷ್ಮೀಸಾಗರ್.—ಅಪರೇಷನ್ ಅಂತ ಹೇಳಿದ್ದಿರಿ.

ಶ್ರೀ ವೈ. ರಾಮಕೃಷ್ಣ.—ಲಾರಿಗಳಲ್ಲಿ ಮನೆ ಹತ್ತಿರ ಹಾಲನ್ನು ಸಾಗಿಸುತ್ತೇವೆ. ಒಂದು ಕಿಲೋ ಮೀಟರ್ ೧-೨ರಷ್ಟು ಜಾಸ್ತಿ ಪೂರಾಯೇಕಾಗುತ್ತದೆ. ಜನರಿಗಾಗಿ ಕೊಡುತ್ತಾಂತರ ರೂಪಾಯಿ ವಿರ್ಜಾಗುತ್ತೆ. ಅಲ್ಲದೇ, ಬೇರೆ ಬೇರೆ ಭಾಗದಿಂದ ತರಿಸಿ ಪರಿಶೀಲನೆ ಮಾಡುತ್ತೇನೆ. ಶ್ರೀಮಾನ್ ಶ್ರೀನಿವಾಸ್‌ರವರು ಫೆಡರೇಷನ್ ಮಾಡಿ ಎಂದು ಹೇಳಿದ್ದಾರೆ. ಹೊನ್ನೆ ನನ್ನ ಇಲಾಖೆಗೆ ಸಂಬಂಧ ಪಟ್ಟಂತೆ ಡಿಪಾರ್ಟ್‌ಮೆಂಡ್ ಬಂದಾಗ ಪ್ರಾಸ್ಪಥಮಿಕವಾಗಿ ನನ್ನ ಗಮನಕ್ಕೆ ತಂದಿದ್ದಾರೆ. ಈ ವಿಚಾರದಲ್ಲಿ ಸಾಕಷ್ಟು ಅಧ್ಯಯನ ಮಾಡಿ ಇದರ ಬಗ್ಗೆ ಕಾರ್ಯಕ್ರಮ ಮಾಡಿಕೊಂಡು ಫೆಡರೇಷನ್ ಮಾಡುವುದಕ್ಕೆ

ಪ್ರಯತ್ನ ಮಾಡುತ್ತೇನೆ. ಸದ್ಯಕ್ಕೆ ನಮ್ಮ ಪಕ್ಕದ ರಾಜ್ಯಗಳಲ್ಲಿರತಕ್ಕಂಥಾದ್ದನ್ನು ನೋಡೋಣ. ಕೇರಳ ದೂರ ಇದೆ. ಆ ಮೇಲೆ ಅದನ್ನು ಯೋಚನೆ ಮಾಡೋಣ. ಶೇ ಪೈಸೆ ೧೦ ಪೈಸೆ ಇದ್ದದನ್ನು ರೈತರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ೨೫ ಪೈಸೆಯನ್ನು ಒಟ್ಟಿಗೆ ಜಾಸ್ತಿಮಾಡಿದ್ದೇವೆ. ಇತಿಹಾಸದಲ್ಲಿಯೇ ಪ್ರಪ್ರಥಮ ಬಾರಿಗೆ ಇಷ್ಟು ಜಾಸ್ತಿ ಮಾಡಿದ್ದೇವೆನ್ನುವುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಸಂತೋಷಪಡಿಸಿದ್ದೇವೆನ್ನುವ ಹೆಮ್ಮೆ ನನಗೆ ಇಲ್ಲ, ಸಂತೋಷಪಡಿಸುವುದಕ್ಕೂ ಆಗುವುದಿಲ್ಲ. ನಮ್ಮಲ್ಲಿರತಕ್ಕ ಬಜೆಟ್ಟಿನಲ್ಲಿ ಅವರಿಗೆ ಸಪ್ಪೋರ್ಟ್ ಪ್ರೈಸ್ ಕೊಡದೇ ಇದ್ದರೂ ಸರಿಯಾದಾದ ಪ್ರೈಸ್ ಕೊಡುವಂತೆ ದಿಟ್ಟತನದ ಹೆಜ್ಜೆಯನ್ನು ಇಟ್ಟಿದ್ದೇವೆ.

ಶ್ರೀ ಹೆಚ್. ಟಿ. ಚೌಡಯ್ಯ.—ಸ್ವಾಮಿ, ಆಡ್‌ಹಾಕ್ ಅರೇಂಜ್‌ಮೆಂಟ್‌ಗೆ ಒಪ್ಪುತ್ತೀರಾ ?

ಶ್ರೀ ಬೈ. ರಾಮಕೃಷ್ಣ.—ಈಗ ೨ ಕೋಟಿ ರೂಪಾಯಿ ನಷ್ಟವಾಗುತ್ತಿರುವಾಗ ಅದನ್ನು ಈಗ ಒಪ್ಪಲಿಕ್ಕೆ ಸಿದ್ಧವಿಲ್ಲ.

ಶ್ರೀ ಡಿ. ಜಯದೇವರಾಜ್ ಅರಸ್.—ನಾವು ಕುಳಿತುಕೊಳ್ಳುತ್ತೇವೆ. ಕನ್‌ಸ್ಯೂಮರ್ ಸಹ ಕುಳಿತು ಕೊಳ್ಳುತ್ತಾರೆ. ನಿಮಗೆ ಲೆಕ್ಕ ಕೊಡುತ್ತೇವೆ. ಎಲ್ಲಿ ಸೋರಿ ಹೋಗುತ್ತದೆ ಎನ್ನುವುದನ್ನು ತೋರಿಸುತ್ತೇವೆ. ಅದನ್ನು ನಮಗೆ ಕೊಡಿ.

ಶ್ರೀ ಬೈ. ರಾಮಕೃಷ್ಣ.—ಇದರ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಲಕ್ಷ್ಮೀಸಾಗರ್ ಅವರು ಆ ಬಗ್ಗೆ ಸಲಹೆ ಕೊಟ್ಟಿದ್ದಾರೆ. ಅದನ್ನು ಮಾಡುತ್ತೇವೆ.

(*ii*) *Admission to Medical Colleges in the State.*

11-00 A.M.

MR. SPEAKER.—The Hon'ble Minister for Health may make a Statement now.

SRI A. K. ABDUL SAMAD (Minister for Health & Family Welfare). Mr. Speaker Sir, recently Government issued orders stipulating the pattern of distribution of MBBS seats and the rates of special tuition fees for admission to the I MBBS course in private medical colleges in the State. The significant improvements made in this regard over the previous year (1979-80) were as follows :

SRI B. BASAVALINGAPPA.—Sir, the copies of the Statment are not supplied to the Leaders of Opposition Parties. Secondly, we cannot hear the Hon'ble Minister. If he can be louder, we can at least hear.

SRI M. C. NANAIAH.—The Hon'ble Minister is wanting to make a statement. Is the Government that helpless even to supply some fifty cyclostyled copies ? I am really sorry about the manner in which the Government is treating. This is a matter the Government should take serious note of.

ಶ್ರೀ ಬಿ. ಎಸ್. ಕೆಂಗೌಡ.—ಅಧ್ಯಕ್ಷರೆ, ನನ್ನ ಸಲಹೆ ಇಷ್ಟೆ. ಸರ್ಕಾರದವರು ಯಾವುದೇ ಹೇಳಿಕೆಯನ್ನು ಕೊಡುವಾಗ ಎಲ್ಲ ಸದಸ್ಯರಿಗೂ ಅದರ ಪ್ರತಿಯನ್ನು ಕೊಡುವುದು ಸೂಕ್ತ. ಮಾನ್ಯ ಸದಸ್ಯರು ಕೆಲವು ಲೀಡರ್ಸ್‌ಗೆ ಕೊಡಿ ಅಂತ ಹೇಳುತ್ತಿದ್ದಾರೆ ಇದು ಸರಿಯಲ್ಲ. ಎಲ್ಲರಿಗೂ ಕೊಡಬೇಕು ಅಂತ ನನ್ನ ಸಲಹೆ.

ಅಧ್ಯಕ್ಷರು.—ಮಂತ್ರಿಗಳು ಸರ್ಕಾರದ ಪರವಾಗಿ ಹೇಳಿಕೆಯನ್ನು ಕೊಡುವಾಗ ನನಗೆ ಮುಂಚಿತವಾಗಿ ಒಂದು ಪ್ರತಿಯನ್ನು ಕಳುಹಿಸಿಕೊಡಬೇಕು. ಹಾಗೆ ಎಲ್ಲ ಸದಸ್ಯರಿಗೂ ಕೊಡುವುದು ಒಳ್ಳೆಯದು.

SRI M. C. NANAIAH.—I think, I must take the Government to task. Here is a case the Government did not give a copy even to the Hon'ble Speaker. The Minister shou'd not be permitted to make his statement if a copy is not before the Hon'ble Speaker.

MR. SPEAKER.—The Government should not repeat this again.

SRI M. C. NANAIAH.—Sir, I am telling the Government is treating the Chair with gross dis-respect by not giving a copy of the Statement. The Hon'ble Speaker should not allow the Minister to read his statement unless a copy is given to the Speaker.

MR. SPEAKER,—I will take it up.

ಶ್ರೀ ಡಿ. ಜಯದೇವರಾಜ ಅರಸ್.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುತ್ತಾ ಇರತಕ್ಕದ್ದು ಬಹಳ ಪ್ರಾಮುಖ್ಯವಾದುದು. ಬಹಳ ಜನ ಇದನ್ನು ಕಾದು ನೋಡುತ್ತಿದ್ದಾರೆ. ಸದಸ್ಯರುಗಳಿಗೆ ಒಂದು ಪ್ರತಿ ಕೊಡದೇ ಇದ್ದರೆ ಹೇಗೆ? ಇವರು ಪತ್ರಿಕೆಯವರಿಗೆ ಕೊಟ್ಟರೆ, ನಾವು ಪತ್ರಿಕೆಯಲ್ಲಿ ಓದಿಕೊಳ್ಳುತ್ತೇವೆ. ಮಾನ್ಯ ಮಂತ್ರಿಗಳು ಏತಕ್ಕೆ ಇಲ್ಲಿ ಓದಬೇಕು.

ಶ್ರೀ ಎಂ. ವೀರಪ್ಪಮೊಯಿಲಿ.—ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ನಾನಯ್ಯನವರು ಒಂದು ಕ್ರಿಯಾಲೋಪ ಎತ್ತಿದ್ದಾರೆ. ಈ ಸದನದಲ್ಲಿ ಇದೇನು ಹೊಸದಲ್ಲ ಸ್ಟೇಟ್‌ಮೆಂಟ್ ಮಾಡುವಾಗ ಅಧ್ಯಕ್ಷನಿಗೆ ಒಂದು ಪ್ರತಿ ಕೊಡಬೇಕಾಗುತ್ತದೆ ಅದನ್ನು ಮಾಡುತ್ತೇವೆ. ಎಲ್ಲಾ ಸದಸ್ಯರಿಗೂ ಎಲ್ಲಾ ಸ್ಟೇಟ್‌ಮೆಂಟ್ ಕಾಪಿಗಳನ್ನು ಕೊಟ್ಟು ಓದುವ ಪದ್ಧತಿ ಇಲ್ಲ. Let us be very clear about the things. ರೂಲ್ ಪ್ರಕಾರ ಈ ಸದನದಲ್ಲಿ ಸ್ಟೇಟ್‌ಮೆಂಟ್ ಮಾಡಬೇಕು. ಕಾಲಿಂಗ್ ಅಟೆನ್‌ಷನ್ ಮಾಡಬೇಕು. ಆದರೆ ಇಲ್ಲಿರುವವರಿಗೂ ಯಾವುದರ ಬಗ್ಗೆಯಾಗಲಿ ಸ್ಪಷ್ಟೀಕರಣ ಕೊಡುವಾಗ ಎಲ್ಲಾ ಸದಸ್ಯರಿಗೂ ಎಲ್ಲಾ ಸ್ಟೇಟ್‌ಮೆಂಟ್ ಕಾಪಿಗಳನ್ನು ಕೊಟ್ಟು ಓದುವ ಒಂದು ಪದ್ಧತಿಯಾಗಿ ನಡೆಸಿಕೊಂಡು ಬಂದಿಲ್ಲ. ಆದರೂ ಆದಷ್ಟು ಮಟ್ಟಿಗೂ ಇಂಥಾ ಪಾಲಿಸಿ ಡಿಸಿಷನ್ ಮಾಡುವಾಗ ಸದನಕ್ಕೆ ಒಂದು ಪ್ರತಿಯನ್ನು ಕೊಡಬೇಕು. We have noted the concern of the Hon'ble Members and we will definitely see that as far as possible, copies of statements are made available to the hon'ble Members ನೆನ್ನೆ ನರಗುಂದ ವಿಚಾರದಲ್ಲಿ ಸ್ಟೇಟ್‌ಮೆಂಟ್ ಮಾಡಬೇಕಾಗಿ ಬಂತು. ಸೈಕ್ಲೋಸ್ಟೈಲ್ ಮಾಡಿಸಿ ಹಂಚುವುದಕ್ಕೆ ಸಾಕಷ್ಟು ಸಮಯ ಇರಲಿಲ್ಲ. ಆದ್ದರಿಂದ ಎಲ್ಲಾ ಕಾಪಿಗಳನ್ನು ಕೊಟ್ಟು ಸ್ಟೇಟ್‌ಮೆಂಟ್ ಮಾಡಬೇಕೆಂದರೆ ರೂಲ್ ಪ್ರಕಾರ ಕೊಡಬೇಕಾಗಿಲ್ಲ. ಅಧ್ಯಕ್ಷರು ಅಪ್ಪಣೆ ಕೊಟ್ಟಿದ್ದೀರಾ.

MR. SPEAKER.—As far as possible, you can avoid.

SRI M. VEERAPPA MOILY.—Gross violation of the Rules of Conduct will not come here. Pulling up the Government and such things will not arise. We will take note of the suggestion and we will try to see that copies of statements are circulated among all the Members. But it does not call for pulling up the Government or gross violation.

ಶ್ರೀ ಬಿ. ವಿ. ಕಕ್ಕಿಲಾಯ.—ಹಿಂದೆ ಆ ರೀತಿ ನಡೆದಿದೆ. ಈಗ ಒಳ್ಳೆಯ ಸಂಪ್ರದಾಯ ಹಾಕಲಿಕ್ಕೆ ಬಂದಿದ್ದೇವೆ ಅಂತ ಹೇಳಿದ್ದೀರಿ. ಈಗಲಾದರೂ ಕೊಡಿ. ನೆನ್ನೆ ನಡೆದದ್ದು ವಿಶೇಷ ಘಟನೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಮಾಡುವಾಗ ಪ್ರಿಂಟ್ ಮಾಡಿ ಕೊಡಬೇಕೆಂದು ಕೇಳಲಿಲ್ಲ. ಅಂತಹ ಸಂದರ್ಭದಲ್ಲಿ ಸರಿ. ಇದು ಬಹಳ ದಿವಸದಿಂದ ನಡೆದಿದೆ. ಇದರ ಬಗ್ಗೆ ವಿರೋಧ ಪಕ್ಷದವರನ್ನು

ಸೂಚನೆ ಕೊಡುವುದಕ್ಕೆ ಕರೆದಿದ್ದರು. ಕೊನೆಗೆ ಹೇಳಿಕೆ ಮಾಡುತ್ತಿದ್ದಾರೆ. ನನ್ನ ಸಲಹೆ ಏನು ಅಂದರೆ ಇದನ್ನು ಅರ್ಧ ಗಂಟೆಯಲ್ಲಿ ಸೈಕ್ಲೋಸ್ಟೈಲ್ ಮಾಡಿಸಿ ಕೊಡಬಹುದು ಅಂತ ಹೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಅಧ್ಯಕ್ಷರೇ, ಸೈಕ್ಲೋಸ್ಟೈಲ್ ಮಾಡಿಸಿ ಸದಸ್ಯರಿಗೆ ಕೊಡುತ್ತೇವೆ.

MR. SPEAKER.—Now, the Hon'ble Minister for Health may make his statement.

SRI A K. ABDUL SAMAD (Minister for Health and Family Welfare) Sir, I beg to make the following statement.

